# <u>ಸಕಾಲದಲ್ಲೂ ಅಕಾಲದಲ್ಲೂ 2021ನೇ ವರ್ಷದಲ್ಲಿ ಭರವಸೆಯ ಸಂದೇಶ</u>

ಅನೇಕ ಮಹಿಳೆಯರು ಹಾಗೂ ಮಹನಿಯರು ಕಷ್ಟ, ದುಃಖಗಳನ್ನು ಲೆಕ್ಕಿಸದೆ ನಿರ್ಧಿಷ್ಟ ಹಾಗೂ ಅನಿರ್ಧಿಷ್ಟ ಸಮಯಗಳಲ್ಲಿ ಅವರು ತಮ್ಮ ಸರ್ವಸ್ವವನ್ನು ತ್ಯಾಗಮಾಡಿ ಸಮರ್ಪಣೆಯ ಭಾವದಿಂದ ಮಾನವೀಯತೆಯಿಂದ ಜೀವಿಸುವುದರಿಂದ ಮಾನವೀಯತೆಯು ಇವತ್ತು ಎಲ್ಲವನ್ನು ಮೆಟ್ಟಿ ನಿಂತು ಮುಂದೆ ಸಾಗಲು ಸಫಲವಾಯಿತು. ಈ ಕೆಲವೇ ತಿಂಗಳುಗಳಲ್ಲಿ ಅನೇಕ ಯುವಕ–ಯುವತಿಯರು ತಮ್ಮ ಭವಿಷ್ಯದ ಬಗ್ಗೆ ಚಿಂತೆಯನ್ನು ವ್ಯಕ್ತಪಡಿಸಿರುವರು. ಯಾವ ರೀತಿಯ ಭರವಸೆಯು ನಮ್ಮ ಮುಂದಿನ ಜೀವಿತಕ್ಕೆ ಮಾರ್ಗಸೂಚಿಯನ್ನು ನೀಡಬಲ್ಲುದು! ಯಾವ ವಿಷಯಗಳನ್ನು ನಾವು ನಂಬಲು ಸಾಧ್ಯ, ನಾವು ಯಾವ ಗುರಿಯನ್ನು ಸಾಧಿಸಿ ಅದರ ಪ್ರಕಾರ ಜೀವಿಸಬಹುದು ಎಂಬುದರ ಬಗ್ಗೆ ಗಣನೀಯವಾಗಿ ಚರ್ಚೆ ನಡೆಯುತ್ತಿರುವಾಗ ಅನೇಕರು ತಮ್ಮ ಸ್ವರ ಎತ್ತಿ ಈ ದಿನಗಳಲ್ಲಿ ನಡೆಯುವ ಪ್ರಸಕ್ತ ವಿಧ್ಯಾಮಾನಗಳ ಬಗ್ಗೆ ಅವಲೋಕಿಸಬೇಕಾಗುತ್ತದೆ.2021 ನೇ ವರ್ಷದ ಈ ಸಂದೇಶವನ್ನು ಚಿಂತನೆ ಮಾಡಿ ಅದಕ್ಕೆ ತಕ್ಕುದಾದ ಉತ್ತರಗಳನ್ನು ಹುಡುಕುವಲ್ಲಿ 15 ವರ್ಷಗಳಿಗೆ ಮೇಲ್ಪಟ್ಟ ಹಾಗೂ 35 ವರ್ಷಗಳಿಗೆ ಕೆಳಪಟ್ಟ ಯುವಕ–ಯುವತಿಯರನ್ನು ಆಮಂತ್ರಿಸುತ್ತೇವೆ. ನಿಮ್ಮ ಚಿಂತನೆಗಳನ್ನು ವಿವಿಧ ಮಾಧ್ಯಮಗಳ ಮೂಲಕ ಭಿತ್ತರಿಸಲಾಗುವುದು. ಮಾನವ ಭರವಸೆಯ ಸಂಕೇತ ಹೇಗೆ! ಈ ವಿಷಯದ ಮೇಲೆ ನಿಮ್ಮ ಚಿಂತನೆಗಳಿದ್ದರೆ ನಮ್ಮನ್ನು ಸಂಪರ್ಕಿಸಿರಿ.

ಕೋವಿಡ್ ಎಂಬ ಮಾರಕ ರೋಗವು ಮಾನವನ ಜೀವಕ್ಕೆ ಅಪಾಯವನ್ನು ತಂದ ಈ ಕಾಲಘಟ್ಟದಲ್ಲಿ ಪ್ರಪಂಚದ ಅನೇಕ ಪ್ರಾಂತ್ಯಗಳಲ್ಲಿ ಸರಕಾರಗಳು ಹಾಗೂ ಸಂಘ–ಸಂಸ್ಥೆಗಳು ಹಾಗೂ ಸಾಮಾನ್ಯ ಜನರು ಅನೇಕ ಕಾಳಜಿಯನ್ನು ವಹಿಸಿ ಪರಸ್ಪರ ಸಹಾಯ ಹಸ್ತವನ್ನು ನೀಡುವುದನ್ನು ನಾವು ಕಾಣುತ್ತೇವೆ. ಈ ಪರಿಸ್ಥಿತಿಯಲ್ಲಿ ನಾವು ನಮ್ಮ ಮಾನವೀಯ ಸಂಬಂಧಗಳನ್ನು ಉಳಿಸಿ ಬೆಳೆಸಬೇಕಾಗಿದೆ. ಅನೇಕರು ಹಿಂದಿನಿಂದ ಮಾಡುವುದ್ದಕ್ಕಿಂತ ಹೆಚ್ಚಾಗಿ ಪರಸೇವೆಯಲ್ಲಿ ತೊಡಗಿದ್ದಾರೆ. ಈ ಸನ್ನಿವೇಶವು ನಮ್ಮ ಮುಂದಿನ ಹಾದಿಯನ್ನು ಅರ್ಹಗರ್ಭಿತವಾಗಿ ಮುನ್ನಡೆಸಲು ಸಹಾಯವಾಗಬಹುದು. ಎಷ್ಟರ ಮಟ್ಟಿಗೆ ನಮ್ಮ ಯುವಕ–ಯುವತಿಯರು ಈ ಪ್ರಪಂಚವನ್ನು ತಮ್ಮ ಮನೆಯನ್ನಾಗಿ ಪರಿವರ್ತಿಸಲು ತಮ್ಮ ಶಕ್ತಿ ಮೀರಿ ದುಡಿಯುತ್ತಾರೋ ಅಷ್ಟರವರೆಗೆ ಜಗದೆಡೆಗಳಲ್ಲಿ ಈ ಸೇವೆಯ ಭಾವವು ಚಿಮ್ಮಿ ಹರಿಯುತ್ತಿರುತ್ತದೆ. ಅನೇಕ ಪ್ರಾಪಂಚಿಕ ಪ್ರಶ್ನೆಗಳಿಗೆ ಗಹನವಾದ ಉತ್ತರಗಳು ದೊರೆಯದೆ ಇದ್ದರೂ ಈ ಭರವಸೆಯ ಚಿಂತನೆಯು, ನಾವು ನಮ್ಮ ಭೂಮಿತಾಯಿಯ ರಕ್ಷಣೆ ಮತ್ತು ಹವಮಾನ ವೈಪರಿತ್ಯಗಳನ್ನು ತಡೆಯುವ ಹಾಗೂ ಪ್ರಕೃತಿಯನ್ನು ಗೌರವದಿಂದ ಕಾಣುವ ಮನಸ್ಸನ್ನು ನೀಡುತ್ತದೆ. ಈ ಪ್ರಕೃತಿಯು ದೇವರು ನಮಗೆ ನೀಡಿದ ಉಡುಗೊರೆಯಾಗಿದೆ. ಈ ಉಂಬಳಿಯಾಗಿ ನೀಡಿದ ಪ್ರಕೃತಿಯ ಸಂರಕ್ಷಣೆಯು ನಮ್ಮ ಆದ್ಯ ಕರ್ತವ್ಯವಾಗಿದೆ.

ಅನ್ಯಾಯದ ವಿರುದ್ಧ ಹಿಂದಿನಿಂದಲೂ ಅನೇಕರು ಧ್ವನಿಯೆತ್ತಿದ್ದಾರೆ. ಆದರೆ ಕೆಲವು ಅಧಿಕಾರಿಗಳು ತಮ್ಮ ಅಧಿಕಾರವನ್ನು ಒಳ್ಳೆಯ ಕೆಲಸ–ಕಾರ್ಯಗಳಿಗೆ ವಿನಿಯೋಗಿಸದೆ ಇರುವಾಗ ಮಾನವನ ಜೀವಿತದಲ್ಲಿ ನಿರಾಶೆಯುಂಟಾಗುತ್ತದೆ. ಅದಕ್ಕಾಗಿ ನಾವು ಪ್ರಸ್ತುತ ಸಮಯದಲ್ಲಿ ನ್ಯಾಯ–ನೀತಿಯ ರಾಯಭಾರಿಗಳಾಗಬೇಕಾಗಿದೆ. ಹವಮಾನ ವೈಪರಿತ್ಯ ಹಾಗೂ ಮಾಲಿನ್ಯ ನಿಯಂತ್ರಣದಲ್ಲಿ ನಮ್ಮ ಪಾತ್ರ ಅಧಿಕವಾಗಿದೆ. ನಮ್ಮ ಕ್ರಿಸ್ತೀಯ ಸಭೆಗಳು, ಸಂಘ–ಸಂಸ್ಥೆಗಳು ಇದರ ಬಗ್ಗೆ ಇನ್ನೂ ಹೆಚ್ಚು ಕಾಳಜಿ ವಹಿಸಬೇಕಾಗಿದೆ. ಇದಕ್ಕಾಗಿಯೇ ನಿರ್ಮಿತವಾದ ಹಸುರು ವಲಯಗಳನ್ನು ನಾವು ಜಗತ್ತಿನ ವಿವಿಧೆಡೆಗಳಲ್ಲಿ ಕಾಣುತ್ತೇವೆ. 1989ರಲ್ಲಿ ಯೂರೋಫ್ ಖಂಡದ ಬೆಸೆಲ್ ಎಂಬ ನಗರದಲ್ಲಿ ನಡೆದ ಸಭೆಯಲ್ಲಿ ಪ್ರಾಕೃತಿ ಪ್ರೇಮಿ ಅಥವ ಪರಿಸರ ಪ್ರೇಮಿ ಎಂಬ ವಿಷಯದ ಮೇಲೆ ಚರ್ಚೆ ನಡೆಯಿತು. ಈ ಸಭೆಯು ಎಲ್ಲಾ ಮಾನವರು ಪರಿಸರ ಪ್ರೇಮ ಮತ್ತು ಇಂದನ ಉಳಿಸುವಿಕೆ ಹಾಗೂ ತ್ಯಾಜ್ಯವನ್ನು ಕಡಿಮೆಗೊಳಿಸಲು ಜನರ ಸಹಕಾರವನ್ನು ಕೋರಿತು. ತೈರೆಝಿಯಲ್ಲಿ ನಾವು ಇದರ ಬಗ್ಗೆ ಹೆಚ್ಚು ಕಾಳಜಿಯನ್ನು ವಹಿಸಿದ್ದೇವೆ. ಇದರ ಬಗ್ಗೆ ನಿಮ್ಮ ಅನಿಸಿಕೆಗಳಿಗಾಗಿ ಸಂಪರ್ಕಿಸಿರಿ.

ಈ ಎಲ್ಲಾ ಕಷ್ಟ-ಕಾರ್ಪಣ್ಯಗಳ ನಡುವೆ ನಾವು ಅಣ್ಣ-ತಮ್ಮ, ಅಕ್ಕ-ತಂಗಿಯರಾಗಿ ಭರವಸೆಯನ್ನು ಕಳೆದುಕೊಳ್ಳದೆ ಪರಸ್ಪರ ಸಹಕಾರದಿಂದ ಒಗ್ಗೂಡಬೇಕು, ಜೊತೆಗೆ ವಿವಿಧ ಸಂಘ-ಸಂಸ್ಥೆಗಳಿಗೆ, ಸಭೆಗಳಿಗೆ ಹಾಗೂ ಈ ವಿಷಯಗಳ ಮೇಲೆ ವಿಚಾರ-ವಿನಿಮಯ ಮಾಡಲು ಆಸಕ್ತಿಯಿರುವ ಪ್ರತೀಯೊಬ್ಬರನ್ನೂ ಇದರಲ್ಲಿ ಪಾಲುದಾರರಾಗಬಹುದು. ನಾವು ಸಹೋದರ-ಸಹೋದರಿಯರಾಗಿ ಜೀವಿಸಿದಾಗ ನಮ್ಮಲ್ಲಿರುವ ಭರವಸೆಯು ಹಿಮ್ಮಡಿಯಾಗಿ ಆನಂದವು ಹೆಚ್ಚಾಗುತ್ತದೆ. ಬಡವರ, ವಿಷೇಶಚೇತನ, ಅನಾಥರ, ವೃದ್ಧರ ಅಲೆಮಾರಿಗಳ, ನಿರಾಶ್ರಿತರ ಹೀಗೆ ನಾವು ಎಷ್ಟರ ಮಟ್ಟಿಗೆ ಇಂತವರ ಜೊತೆಗೆ ಇರುತ್ತೇವೂ ಅಷ್ಟರವರೆಗೆ ಈ ನಮ್ಮ ಪರಿಸರವು ದೈವಪ್ರೇರಣೆಯಿಂದ ಕೂಡಿ ಉತ್ತಮವಾಗಿ ಕಾಣುವುದು. ನಮ್ಮ ಪರಸರದಲ್ಲಿರುವ ಕೋವಿಡ್ ಮಹಾಮಾರಿಯು ಮಾನವರ ಬದುಕನ್ನೇ ನಾಶ ಮಾಡುವತ್ತ ಹೊರಟಂತಿದೆ. ಈ ಸಮಯದಲ್ಲಿ ನಾವು ಪರಸ್ಪರ ಹೊಂದಾಣಿಕೆಯಿಂದ ಜೀವಿಸುವುದು ಉತ್ತಮ. ಪೋಪ್ ಫ್ರಾನ್ಸಿಸ್ ಜಗದ್ಗುಗಳ ಪರಿಪತ್ರದಲ್ಲಿ (ಫ್ರಟೆಲ್ಲಿ ಟುಟ್ಟಿ) ಅವರು ಹೀಗೆಂದು ಹೇಳುತ್ತಾರೆ, ನಾವು ಯಾರೂ ಒಬ್ಬಂಟಿಗರಾಗಿ ರಕ್ಷಣೆಯನ್ನು ಹೊಂದುವುದಿಲ್ಲ ಎಂಬುದಾಗಿ. ನಮ್ಮ ನಿಜ ಪರಿಚಯವು ಈ ಭುವಿಯ ಜನರಿಗೆ ನಾವು ನೀಡದೆ ಒಬ್ಬಂಟಿಗನಾಗಿ ಜೀವಿಸಿದರೆ ಹಾಗೂ ನಮ್ಮನ್ನು ನಾವೆ ಪರರಿಗೆ ತೆರೆದುಕೊಳ್ಳದೆ ಇದ್ದರೆ ನಮ್ಮ ಸುತ್ತಮುತ್ತ ನಡೆಯುವ ವಿಷಯಗಳನ್ನು ನಾವು ಪ್ರಾಮಾಣಿಕತೆಯಿಂದ ಕಾಣಲು ಅಸಾಧ್ಯ. ನಾವು ವಿವಿಧ ಬಾಷೆ, ಸಂಸ್ಕೃತಿಗಳಿಗೆ ಒಗ್ಗಿಕೊಳ್ಳದೆ, ವಿವಿಧ ಅಪಘಾತ, ಅವಘಡಗಳಲ್ಲಿ ಸಿಲುಕಿ ಬಾಧೆಪಡುವವರರಿಗೆ ಸಹಾನುಭೂತಿಯನ್ನು ತೋರದೆ ಇದ್ದರೆ ನಮ್ಮ ಬದುಕು ವ್ಯರ್ಥವಾಗುತ್ತದೆ. ನಾವು ನಮ್ಮನಮ್ಮಲ್ಲಿ ಸ್ಪರ್ಧೆಗಳನ್ನು ಏರ್ಪಡಿಸದೆ ಪರಸ್ಪರ ಹೊಂದಾಣಿಕೆಯಿಂದ ಹಾಗೂ ಒಗ್ಗಟ್ಟಿನಿಂದ ಕೂಡಿ ರಾಷ್ಟ್ರೀಯ ಮತ್ತು ಅಂತರಾಷ್ಟೀಯ ಮಟ್ಟದಲ್ಲಿ ಈ ಪರಿಸರವನ್ನು ಕಾಪಾಡಿ, ನಮ್ಮ ಉದಾರ ಮನಸ್ಸಿನಿಂದ ಪರರನ್ನೂ ಉತ್ತೇಜಿಸಲು ಕಲಿಯೋಣ.

ಆತನ ಇರುವಿಕೆಯಲ್ಲಿ ಅಥವ ಅಸ್ತಿತ್ವದಲ್ಲಿ ವಿಶ್ವಾಸ ಮತ್ತು ನಂಬಿಕೆಯನ್ನಿಡುವುದು: ತೈಝೆಯಲ್ಲಿ ಯುವಕ-ಯುವತಿಯರು ವಿಶ್ವಾಸದ ನವವಿಧಾನದ ಬಗ್ಗೆ ಚರ್ಚೆ-ವಿಮರ್ಸೆ, ಚಿಂತನೆಯನ್ನು ಮಾಡುತ್ತಾರೆ. ಅಂದರೆ ವಿಶ್ವಾಸದಲ್ಲಿ ದೃಡವಾಗಿರಲು ಪ್ರಯತ್ನಿಸುತ್ತಾರೆ. ನಂಬಿಕೆ ಎಂದರೇನು? ದೇವರು ಚರಿತ್ರೆಯಲ್ಲಿ ಹಾಗೂ ಮಾನವನ ವೈಯಕ್ತಿಕ ಜೀವಿತದಲ್ಲಿ ಉಪಸ್ಥಿತರಾಗಿದ್ದರೋ? ಈ ಪ್ರಶ್ನೆಗಳನ್ನು ಉತ್ತರಿಸುವ ಸಮಯದ ನಡುವೆ ದೇವರನ್ನು ನಮ್ಮ ಆಲೋಚನೆಗಳ ಮಟ್ಟಕ್ಕೆ ತರುವುದು ಸರಿಯಲ್ಲ. ನಮ್ಮ ಆಲೋಚನೆಗಳಿಗಿಂತ ದೇವರು ಅತೀ ಮಹಿಮಾನ್ವಿತರಾಗಿದ್ದಾರೆ. ನಾವು ಆತನ ಪ್ರೀತಿಗೆ ದಾಹದಿಂದ ಹಾತೊರೆಯುವವರು. ನಮ್ಮ ಆಧ್ಯಾತ್ಮಿಕ ಯಾತ್ರೆಯಲ್ಲಿ ನಾವು ಪರಸ್ಪರ ನಮ್ಮ ಅನುಭವಗಳನ್ನು ಹಂಚಿಕೊಂಡು ಜೊತೆಯಾಗಿ ಮುಂದೆ ಸಾಗಿದರೆ ದೇವರಲ್ಲೂ ಪರರಲ್ಲೂ ನಮ್ಮ ವಿಶ್ವಾಸವು ಹೆಚ್ಚಾಗುವುದು. ನಮ್ಮ ವಿಶ್ವಾಸವು ನಮಗೆ ದೇವರ ಅಸ್ತಿತ್ವದ ಮೇಲೆ ಇರುವ ಸರಳವಾದ ನಂಬಿಕೆಯಾಗಿದೆ. ಈ ನಂಬಿಕೆಯು ನಮ್ಮ ಜೀವಿತದಲ್ಲಿ ಪದೇ ಪಡೆ ಮರುಕಳಿಸುತ್ತಾ ಇರುತ್ತದೆ. ಆದರೂ ಒಮ್ಮೊಮ್ಮೆ ನಮ್ಮಲ್ಲಿ ಅವಿಶ್ವಾಸವು ಮನೆ ಮಾಡಬಹುದು ಎಂದು ಬ್ರದರ್ ರೋಜರ್ ನುಡಿಯುತ್ತಾರೆ. ದೇವರ ಅಸ್ತಿತ್ವವನ್ನು ನಂಬುವುದೆಂದರೆ, ಆತನು ನಮ್ಮ ಕಣ್ಣಿಗೆ ಗೋಚರಸದಿದ್ದರೂ ಈ ಪ್ರಕೃತಿಯಲ್ಲಿ ಹಾಗೂ ಪ್ರತೀ ಮಾನವರಲ್ಲೂ ದೇವರ ವಾಸವಾಗಿದ್ದಾರೆ ಎಂಬ ವಿಶ್ವಾಸವೇ ದೃಢವಾದ ನಂಬಿಕೆಯಾಗಿದೆ. ಯಾರ ಮೇಲೂ ದಬ್ಬಾಳಿಕೆಯನ್ನು ಮತ್ತು ಅಧಿಕಾರವನ್ನು ಚಲಾಹಿಸದೆ ನಮ್ಮ ಹೃದಯಂತರಾಳದ ಮೌನದಲ್ಲಿ ಆತನನ್ನು ಕಾಣಲು ಪ್ರಯತ್ನಿಸಿದರೆ ಆತನು ನಮ್ಮೊಳಗೆ ಜೀವಿಸುತ್ತಾನೆ ಎಂಬ ರಹಸ್ಯವು ನಮಗೆ ತಿಳಿಯುತ್ತದೆ.

**ನವ ದಿಗಂತದ ಹುಡುಕಾಟ:** ಸೇವಾ ಮನೋಭಾವನೆಯ ರಹಸ್ಯದ ಬಗ್ಗೆ ಪವಿತ್ರ ಬೈಬಲ್ ಗ್ರಂಥ ನಮಗೆ ಯಾವ ಬೆಳಕನ್ನು ನೀಡಿದೆ ಎಂಬ ಒಂದು ಪ್ರಶ್ನೆ? ಈ ಪ್ರಶ್ನೆಗೆ ಉತ್ತರವಾಗಿ, ದೇವರು ಪವಿತ್ರಾತ್ಮರ ಅನ್ಯೋನ್ಯತೆಯಲ್ಲಿ ಒಗ್ಗೂಡಿ ನಮಗೆ ಒಂದು ದಿವ್ಯ ಸ್ಫೂರ್ತಿಯಾಗಿ ಹೊರಹೊಮ್ಮಿದ್ದಾರೆ. ಈ ಸೇವಾಭಾವದಲ್ಲಿ ಪ್ರಭುಕ್ರಿಸ್ತರ ಪಾತ್ರವು ಅಧಿಕವಾಗಿ ನಾವು ಕಾಣುತ್ತೆವೆ. ಆತನು ತನ್ನ ಸೇವೆಯಲ್ಲಿ ತನ್ನ ಉಸಿರನ್ನೇ ಬೆರೆಸಿ ಕೊನೆಯ ತನಕ

ಪ್ರಾಮಾಣಿಕನಾಗಿ ತನ್ನ ಜೀವವನ್ನೇ ಮಹಾತ್ಯಾಗವಾಗಿ ಅರ್ಪಿಸಿದನು. ಆತನ ಶಿಲುಬೆಯಾತನೆ ಮತ್ತು ಮರಣ ಅಸಾಯಕತೆಯು ಅಥವ ಸೋಲು ಎಂದು ಕಂಡರೂ ಆತನ ಪುನರುತ್ಥಾನದ ವಿಚಾರವನ್ನು ಪಸರಿಸಿದ ಮಗ್ದಲದ ಮರಿಯಳ ಆನಂದ ಅಷ್ಟಿಷ್ಟಲ್ಲ! ಕ್ರಿಸ್ತನ ಮೃತ್ಯುಂಜಯ ಸುದ್ಧಿಯು ನಂಬಲಸಾಧ್ಯವಾದ ಸುದ್ಧಿಯಾಗಿ ಹೊರಹೊಮ್ಮಿತು. ಆತನ ಪ್ರೀತಿಯು ಎಲ್ಲಾ ದ್ವೇಷವನ್ನೂ. ಕೋಪವನ್ನೂ, ಅಸೂಯೆಯನ್ನೂ ಸಾವನ್ನೂ, ನೋವನ್ನೂ ಜಯಿಸಿ ಬಂದ ಸುದ್ಧಿಯಾಗಿತ್ತು. ಆತನು ಕತ್ತಲ ಎಡೆಗಳಲ್ಲಿ ಬೆಳಕನ್ನು ಸೂಸಿದನು. ಈ ಶುಭಸಮಾಚಾರವನ್ನು ಆಲಿಸಿದ ಪ್ರಥಮ ಕ್ರೈಸ್ತರು ಆನಂದಭರಿತಾರಾಗಿ ಈ ಸುವಿಷೇಶಕ್ಕೆ ಸಾಕ್ಷಿಯಾದರು. ಆತನು ದೇವರಲ್ಲಿ ಐಕ್ಯವಾಗಿ ಜೀವಿಸುತ್ತಿದ್ದಾನೆ, ಇಡೀ ಪ್ರಪಂಚವನ್ನು ಆತನು ಪವಿತ್ರಾತ್ಮರ ಪಭೆಯಿಂದ ತುಂಬಿಸುತ್ತಾನೆ. ಆತನು ಪ್ರತೀ ಮಾನವರಲ್ಲಿ ಜೀವಿಸುತ್ತಿದ್ದಾನೆ. ಬಡವ ಮತ್ತು ದೀನಧರಿದ್ರರಿಗೆ ನ್ಯಾಯವನ್ನು ನೀಡುವವನಾಗಿದ್ದಾನೆ. ಸಾಮಾಜಿಕ ಅಸಮತೋಲನವನ್ನು ಹೋಗಲಾಡಿಸಿ ಒಂದು ಹೊಸ ಆಯಾಮವನ್ನು ಅಸ್ಥಿತ್ವಕ್ಕೆ ತರುತ್ತಾನೆ. ಮತ್ತೆ ಮತ್ತೆ ಭಯದ ನೆರಳಲ್ಲಿ ಜೀವಿಸುವವರಿಗೆ ಜೀವ ನೀಡುವ ಚಿಲುಮೆಯಾಗಿ ಅವರನ್ನು ಶಾಂತಿಯ ಸಾಧನಗಳಾಗಿ ಮಾರ್ಪಡಿಸುತ್ತಾನೆ.

ಅದರ ಫಲಿತಾಂಶವಾಗಿ ದೇವರು ತಮ್ಮ ರಹಸ್ಯಮಯವಾದ ಸೆಳೆತದಿಂದ ನಮ್ಮನ್ನು ಕೊನೆಯ ವರೆಗೆ ಆತನ ಪ್ರೀತಿಯಲ್ಲಿ ಐಕ್ಯತೆಯಿಂದ ಬಾಳಲು ಹಾಗೂ ಆತನ ಸಹಭಾಗಿತ್ವದಲ್ಲಿ ಪಾಲುದಾರರಾಗಲು ಯೋಜನೆಯೊಂದನ್ನು ಸಿದ್ಧಪಡಿಸಿದ್ದಾನೆ. ಧರ್ಮಸಭೆಯೆಂದರೆ ನಾವು ಕೇವಲ ನಮ್ಮ ಸಭೆಗೆ ಸೀಮಿತರಾಗದೆ ಸರ್ವರೊಡನೆ ಸ್ನೇಹ ಸಂಬಂಧವನ್ನು ಬೆಳೆಸಲು ಶಕ್ತರಾಗಬೇಕಾಗುತ್ತದೆ. ನಮ್ಮ ವೈರಿಗಳನ್ನು ಕ್ಷಮಿಸುವ ಹೃದಯವು ನಮ್ಮದಾಗಿರಬೇಕು. ಕೋವಿಡ್ ಮಹಾಮಾರಿ ರೋಗದ ಈ ಸಮಯದಲ್ಲೂ ನಮ್ಮ ಧರ್ಮಸಭೆಯು ಪರಸ್ಪರ ಸಹಾಯ ಹಸ್ತವನ್ನು ನೀಡಿ ಎಲ್ಲರೊಡಗೂಡಿ ಸಹೋದರತ್ವವನ್ನು ಸ್ಥಾಪಿಸಲು ಪಣತೊಟ್ಟಿದೆ. ಇಲ್ಲಿ ಅನೇಕ ಚಿಂತನೆಗಳಿಗೆ ಅಥವ ಅನಿಸಿಕೆಗಳಿಗೆ ಸ್ಥಳವಿದೆ. ಆದರೆ ಇವುಗಳಲ್ಲಿ ಕೇವಲ ಮೂರು ಅಂಶಗಳು ಇಲ್ಲಿವೆ ನೋಡಿ: (1) ವಿವಿಧತೆಯಲ್ಲಿ ಏಕತೆ, ಅರ್ಥಾತ್ ಮಾನವೀಯತೆಯ ಮೌಲ್ಯಗಳ ಆಧಾರದ ಮೇಲೆ ನಮ್ಮ ಧರ್ಮಸಭೆಯು ಪರಸ್ಪರ ಒಬ್ಬರೊಬ್ಬರು ಆಲಿಸಿ, ಹೊಂದಾಣಿಕೆಯಿಂದ ಕೂಡಿ ಐಕ್ಯತೆಯನ್ನು ಕಾಪಾಡುವುದು. (2) ಯುದ್ಧದ ಕರಿನೆರಳಲ್ಲಿ ಜೀವಿಸುವವರು, ನಿರಾಶ್ರಿತರ ಸಮಸ್ಯೆ, ಜಾಗತಿಕ ತಾಪಮಾನ, ಪರಿಸರ ಮಾಲಿನ್ಯ, ತ್ಯಾಜ್ಯ ಹೀಗೆ ಪರಿಸರದ ಬಗ್ಗೆ ಗಾಢವಾದ ಆಸಕ್ತಿಯನ್ನು ಬೆಳೆಸುವುದು ಹಾಗೂ ನಮ್ಮಿಂದಾದಷ್ಟು ಪರಸ್ಪರ ಸಹಾಯ ಹಸ್ತವನ್ನು ಚಾಚುವುದು. (3) ನಮ್ಮ ಧರ್ಮಸಭೆಗಳಲ್ಲಿ, ಧರ್ಮಕೇಂದ್ರಗಳಲ್ಲಿ ವಿವಿಧ ರೀತಿಯಲ್ಲಿ ತೊಂದರೆಗೀಡಾದವರಿಗೆ ತುಂಬು ಹೃದಯದ ಸ್ವಾಗತವನ್ನು ನೀಡುವುದು. ಅಂದರೆ ಅವರ ಮೊರೆಯನ್ನು ಆಲಿಸುವುದು ಹಾಗು ಸಹಾಯ ನೀಡುವುದು. ಇವುಗಳು ನಮಗೆ ತೈರ್ಥಿಯಲ್ಲಿ ಅನುಭವವಾದ ವಿಷಯಗಳು. ಇಲ್ಲಿ ನಾವು ಈ ಕಾರ್ಯದಲ್ಲಿ ನಿರತರಾಗಿದ್ದೇವೆ. ಕ್ರಿಸ್ತೇಸು ನಮ್ಮ ಹಳೆಯ ಹಾದಿಯನ್ನು ಬದಲಿಸಿ ನೂತನ ಹಾದಿಯನ್ನು ತೆರೆದನು. ಹಾಗೇಯೇ ಈ ಹೊಸ ಹಾದಿಅಯಲ್ಲಿ ನಾವು ಪಯಣಿಸಲು ಆತನು ನಮಗೆ ಕರೆ ನೀಡುತ್ತಾನೆ. ಈ ಭರವಸೆಯು ಪ್ರಭು ಕ್ರಿಸ್ತನಲ್ಲಿ ಬೇರುಬಿಟ್ಟಿದೆ. ಮಾನವನನ್ನು ಘನತೆ ಮತ್ತು ಗೌರವದಿಂದ ಕಾಣಲು ಈ ಭರವಸೆ ನಮಗೆ ಸಹಾಯ ಮಾಡಬಹುದು. ನವಿರಾದ ಉಲ್ಲಾಸದಿಂದ ಕೂಡಿ ಆತನ ಈ ಯೋಜನೆ ಕಾರ್ಯಗತವಾಗುವಂತೆ ನಾವೆಲ್ಲರೂ ಶ್ರಮಿಸೋಣ. ಈ ಕಾರ್ಯವನ್ನು ಮುಂದುವರಿಸಲು ಬೇಕಾದ ಧೈರ್ಯವನ್ನು ಕ್ರಿಸ್ತೇಸುವಿನಿಂದ ಪಡೆದುಕೊಳ್ಳೋಣ. ಈ ಸಂದೇಶವನ್ನು ಧ್ಯಾನಿಸುವ ನಿಮ್ಮೊಂದಿಗೆ ನಾನು ಸದಾ ಪ್ರಾರ್ಥನೆಯಿಂದ ಐಕ್ಯವಾಗಿರುತ್ತೇನೆ.

ಕ್ರಿಸ್ತೇಸುವೆ ನಿಮ್ಮ ಒಳ್ಳೆಯತನಕ್ಕಾಗಿ ನಿಮ್ಮನ್ನು ಸ್ತುತಿಸುತ್ತೇವೆ. ನಿಮ್ಮಲ್ಲಿರುವ ದೈನ್ಯ ಸ್ವಭಾವದ ಮೂಲಕು ನೀವು ದೇವರ ಬೆಳಕನ್ನು ತಮ್ಮ ಜೀವನದಲ್ಲಿ ಪಡೆದು ಇವತ್ತು ನಮ್ಮ ಜೀವಿತಗಳಲ್ಲೂ ನೀಡಿ, ನಮ್ಮಲ್ಲಿರುವ ಛಾಯಗಳನ್ನು ಗುಣಪಡಿಸಿದ್ದಿರಿ. ನಮ್ಮಲ್ಲಿರುವ ಭಯವನ್ನು ಹೊಗಲಾಡಿಸಿ ನಾವು ಪರಿವರ್ತಿತ ಜೀವತವನ್ನು ಪಾರಂಭಸಲು ಸಹಾಯ ಮಾಡುತ್ತಿರಿ. ನಮ್ಮ ಹೃದಯವನ್ನು ನಂಬಿಕೆಯ ಸೌದವನ್ನಾಗಿ ರೂಪಿಸಿ ದೇವರ ಬೆಳಕನ್ನು ಸ್ವೀಕರಿಸಿ ಸಕಾಲದಲ್ಲೂ ಅಕಾಲದಲ್ಲೂ ಪರರಿಗೆ ಭರವಸೆಯ ಬೆಳಕನ್ನು ನೀಡುವ ಸಾಧನವನ್ನಾಗಿ ಮಾಡಿದಿರಿ.

ತಾಯಿ ಮರಿಯಳು ಪ್ರೀತಿ ಮತ್ತು ದೀನತೆಯ ಸಾದನವಾಗಿ ನಮ್ಮಲ್ಲಿ ಭರವಸೆ ಮತ್ತು ಆತ್ಮ ಪರಿವರ್ತನೆಗೆ ನಾಂದಿಯಾಗಿದ್ದಾರೆ.

ಎನ್ನ ಮನ ಮಾಡುತ್ತಿದೆ ಸರ್ವೇಶ್ವರನ ಸ್ತುತಿ । ಉಲಾಸಿಸುತ್ತಿದೆ ಮುಕ್ತಿದಾತ ದೇವನಲಿ । ಗರ್ವ ಹೃದಯಿಗಳನಾತ ಚದರಿಸಿದನು । ಇಳಿಸಿಹನು ಗದ್ದುಗೆಯಿಂದ ಘನಾಧಿಪತಿಗಳನು । (ಲೂಕ 1:46–56).

ಕ್ರಿಸ್ತೇಸು ನಮ್ಮನ್ನು ಒಂಟಿಯಾಗಿ ಅಥವ ಅನಾಥರನ್ನಾಗಿ ಬಿಡಲಿಲ್ಲ. ಆತನು ಪಿತನಲ್ಲಿಗೆ ಮರಳಿ ಹೋದ ಮೇಲೆ ಆತನು ವಾಗ್ದಾನಮಾಡಿದ  ಪರಿಶುದ್ಧಾತ್ಮರನ್ನು ತನ್ನ ಪ್ರೇಷಿತರ ಮೆಲೆ ಕಳುಹಿಸಿದನು. ಈ ಆತ್ಮವು ಪ್ರೇಷಿತರಿಗೆ ಕ್ರಿಸ್ತೇಸುವಿನ ಅಸ್ತಿತ್ವದ ಬಗ್ಗೆ ಭರವಸೆ ನೀಡಿತು. ನಿತ್ಯವೂ ಆತನಲ್ಲಿ ಜೀವಿಸುವ ಭಾಗ್ಯವನ್ನು ಆತನು ಅವರಿಗೆ ಕಳುಹಿಸಿದನು (ಯೊವಾನ್ನ 14:15–31).

ಹೊಸ ಗೀತೆಯನ್ನು ಹಾಡಿರಿ ಪ್ರಭುವಿಗೆ । ವಿಶ್ವವೆಲ್ಲವೂ ಹಾಡಲಿ ಪ್ರಭುವಿಗೆ । ಆತನ ಮುಕ್ತಿ ಮಾರ್ಗವನ್ನು ನಿತ್ಯವೂ ಸಾರಿರಿ । ಪ್ರಸಿದ್ಧಪಡಿಸಿರಿ ಆತನ ಘನತೆಯನು ರಾಷ್ಟ್ರಗಳಿಗೆ । ಆತನದ್ಭುತ ಕಾರ್ಯಗಳನು ಸಕಲ ಜನಾಂಗಗಳಿಗೆ । (ಕೀರ್ತನೆ 96).

**ಈ ಭರವಸೆ ಮತ್ತು ನಂಬಿಕೆಯ ಯಾತ್ರೆ 2021ರಲ್ಲಿ:**

ಪ್ರಸ್ತುತ ಅನಿರ್ಧಿಷ್ಟ ಕಾಲಘಟ್ಟದಲ್ಲಿ ಮಹಾಮಾರಿ ರೋಗದ ನಡುವೆಯೂ ಅನಿವಾರ್ಯಗಾಗಿ ಈ ಭರವಸೆಯು ನಮ್ಮನ್ನು ಹೊಸ ಆಯಾಮದೆಡೆಗೆ ಮುಂದುವರಿಸುತ್ತಾ ಹೋಗುತ್ತದೆ.  ಲೋಕ್ಡೌನ್ ಸಮಯದಲ್ಲೂ ನಮಗೆ ಪರಸ್ಪರ ಬಾಂಧವ್ಯ ಎಷ್ಟೊಂದು ಮಹತ್ತರವೆಂಬುದು ನಮಗೆ ತಿಳಿದ ವಿಷಯ.  ಈ ಕಷ್ಟದ ಸಮಯದಲ್ಲಿ ಎಲ್ಲಾ ಸಭೆಗಳು ನಿಗದಿತವಾಗಿ ನಡೆಯುತ್ತವೋ ಇಲ್ಲವೋ ತಿಳಿಯದು ಆದರೆ ಎಲ್ಲಾ ಸಭೆಗಳು ನಾವು ಆಯೋಜಿಸಿದ ಹಾಗೆ ನಡೆಯುತ್ತವೆ ಎಂಬ ನಂಬಿಕೆ ನಮಗಿದೆ.

**ನಂಬಿಕೆಯ ಯಾತ್ರೆ 2021 ಇದರೆ ಕೆಲವೊಂದು ರೂಪುರೇಷೆಗಳು ಈ ಕೆಲವು ಹಂತಗಳಲ್ಲಿವೆ.**

ತೈಝೆಯಲ್ಲಿ ವಾರಕ್ಕೊಮ್ಮೆ ನಡೆಯುವ ಸಭೆಗಳು (ಇಡೀ ವರ್ಷ)

ವಿವಿಧ ರಾಷ್ಟ್ರ ಅಥವ ಖಂಡಗಳ ಸಭೆಗಳು : ಎಲ್ಲೆಲ್ಲಿ ಸಹೋದರರು ವಾಸವಾಗಿದ್ದಾರೆ ಆ ಸ್ಥಳಗಳಲ್ಲಿ.

ಕ್ರೈಸ್ತ ಮತ್ತು ಮುಸಲ್ಮಾನ ಯುವಕರ ಸ್ನೇಹತ್ವ ಸಭೆಗಳು:  ಜುಲೈ 14 ರಿಂದ 18ರ ವರೆಗೆ 2021.

ವಾರದ ಚಿಂತನಾ ಸಭೆಗಳು: 18 ರಿಂದ 35 ವರ್ಷ ವಯೋಮಿತಿಯವರಿಗೆ : ಆಗಸ್ಟ್ 22 ರಿಂದ 29 ರ ವರೆಗೆ 2021.

ಯುರೋಫ್ ದೇಶದ ತುರೀನ್ ನಗರದಲ್ಲಿ ಸಭೆ: ಡಿಸೆಂಬರ್ 28 ರಿಂದ ಜನವರಿ 1 ವರೆಗೆ 2021.

ನಂಬಿಕೆಯ ಯಾತ್ರೆ 2021 : ಜೆರೂಸಲೇಂ ಪುಣ್ಯ ಭೂಮಿಗೆ ಬೇಟಿಯನ್ನು ಏರ್ಪಡಿಸಲಾಗಿದೆ, ದಿನಾಂಕವನ್ನು ಬಹು ಬೇಗನೇ ತಿಳಿಯಪಡಿಸಲಾಗುವುದು.